ಆನೆಗಳ ಮಾವುತರ ಸೇವೆಯನ್ನು ಖಾಯಂಗೊಳಿಸುವುದು

756(1028) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರಾರಾವ್ ನಾಡಗೌಡ:(ಮುದ್ದೇಬಿಹಾಳ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯ ಅಧೀನದಲ್ಲಿ ಸಾಕಿರುವ ಆನೆಗಳ ಸಂಖ್ಯೆ ಎಷ್ಟು;

ಆ) ಈ ಆನೆಗಳ ದಿನನಿತ್ಯದ ಪಾಲನೆಗೆ ನೇಮಿಸಿದಂತಹ ಸಿಬ್ಬಂದಿಗಳೆಷ್ಟು; (ವಿವರ ನೀಡುವುದು)

ಇ) ಆನೆಗಳ ಮಾವುತರ ಸೇವೆಯನ್ನು ಇಲ್ಲಿಯವರೆಗೂ ಖಾಯಂಗೊಳಿಸಿಲ್ಲದಿರುವುದಕ್ಕೆ ಕಾರಣವೇನು;

ಈ) ಹಾಗಿದ್ದಲ್ಲಿ, ಇವರುಗಳ ಸೇವೆಯನ್ನು ಎಂದಿನಿಂದ ಖಾಯಂಗೊಳಿಸಲಾಗುವುದು?

ಶ್ರೀ ಬಿ ಎಸ್ ಯಡಿಯೂರಪ್ಪ:(ಮುಖ್ಯಮಂತ್ರಿಗಳು)

ಅ) ಅರಣ್ಯ ಇಲಾಖೆಯ ಅಧೀನದಲ್ಲಿ ಸಾಕಿರುವ ಆನೆಗಳ ಒಟ್ಟು ಸಂಖ್ಯೆ: 96

ಆ) ಈ ಆನೆಗಳ ದಿನನಿತ್ಯದ ಪಾಲನೆಗೆ ಈ ಕೆಳಕಂಡ ಸಿಬ್ಬಂದಿಗಳನ್ನು ನೇಮಿಸಿದೆ.

	ಹುದ್ದೆ	ಮಂಜೂರಾದ ಸಂಖ್ಯೆ	ಭರ್ತಿಯಾದ ಸಂಖ್ಯೆ	ಖಾಲಿ ಇರುವ ಸಂಖ್ಯೆ
i)	ಆನೆ ಜಮೇದಾರ	4	2	2
ii)	ಆನೆ ಮಾವುತ	71	53	18
iii)	ಆನೆ ಕಾವಾಡಿ	90	79	11

ಇ) ಕಳೆದ ಸಾಲಿನಲ್ಲಿ ತಾತ್ಕಾಲಿಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಾವುತರ ಸೇವೆಯನ್ನು ಸಕ್ರಮಗೊಳಿಸಿದೆ. ಖಾಲಿ ಇರುವ ಉಳಿದ ಆನೆ ಮಾವುತ / ಕಾವಾಡಿಗಳ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ದೊರೆಯದ ಕಾರಣ ನೇಮಿಸಲು ಆಗುತ್ತಿಲ್ಲ. ಇಷ್ಟರಲ್ಲಿಯೇ ಉಳಿದ ಹುದ್ದೆಗಳನ್ನು ಅರ್ಹ ಅಭ್ಯರ್ಥಿಗಳಿಂದ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳು

1362(757) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ, ಎಂ.ಎಲ್.ಎ:(ಮುದ್ದೇಬಿಹಾಳ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್‌ಗಳು ಕಾರ್ಯ ನಿರ್ವಹಿಸುತ್ತಿವೆ;

ಆ) ಇವುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವಿವಿಧ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಇ) ಬೇರೆ ಬೇರೆ ಹುದ್ದೆಗಳಲ್ಲಿ ಇದ್ದಂತಹ ಸಿಬ್ಬಂದಿಗಳೆಷ್ಟು;(ಸಂಪೂರ್ಣ ವಿವರ ನೀಡುವುದು);

ಶ್ರೀ ಬಿ ಜನಾರ್ಧನ ರೆಡ್ಡಿ(ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು)

ಅ) 13(ಹದಿಮೂರು) ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಆ) 409 (ನಾಲ್ಕ ನೂರ ಒಂಬತ್ತು)

ಇ)

ವಿಭಾಗೀಯ ವ್ಯವಸ್ಥಾಪಕರು	1
ಸಹಾಯಕ ಪ್ರಧಾನ ವ್ಯವಸ್ಥಾಪಕರು	1
ನಿವಾಸಿ ವ್ಯವಸ್ಥಾಪಕರು	5
ವ್ಯವಸ್ಥಾಪಕರು/ಸಹಾಯಕವ್ಯವಸ್ಥಾಪಕರು/ಸಾರ್ವಜನಿಕ	11